

ಡೇಟಾ ಎಂಟ್ರಿಯಲ್ಲಿ ತೊಡಗಿರುವ ಮಹಿಳೆಯರು

## ರತ್ನಗಿರಿ, ಶಂಕರಗುಡ್ಡಗಳಲ್ಲೂ...

ಇಲ್ಲಿ ಮಹಿಳೆಯರು ಆರ್ಥಿಕವಾಗಿ ಸದೃಢತೆಯತ್ತ ಹೆಜ್ಜೆ ಹಾಕಿ ಬದುಕಿನಲ್ಲಿ ಯಶ ಕಂಡಿದ್ದನ್ನು ಗಣನೆಗೆ ತೆಗೆದುಕೊಂಡು ಮಹಾರಾಷ್ಟ್ರ ರತ್ನಗಿರಿಯಲ್ಲಿ 2015ರಲ್ಲಿ ಇಂಥದ್ದೇ ಯೋಜನೆ ಆರಂಭಿಸಲಾಯಿತು. ಇದು ಎಂಥ ಕುಗ್ರಾಮವೆಂದರೆ ಜನನಿಬಿಡ ಪಟ್ಟಣದಿಂದ ಸುಮಾರು 15 ಕಿಮೀ ದೂರದಲ್ಲಿ ಈ ಹಳ್ಳಿಗಳಿವೆ, ಇಲ್ಲಿನ ಮಹಿಳೆಯರು ಕಡುಬಡವರು. ಇಂಥವರಿಗೆ ಉದ್ಯೋಗ ನೀಡಿದ್ದು ಕೂಡ ಇದೇ ಸಂಸ್ಥೆ. ಇಲ್ಲಿ 110 ಮಹಿಳೆಯರು ಸ್ವಾವಲಂಬಿಗಳಾಗಿದ್ದಾರೆ. ಆದಾಗಿ 2016ರಲ್ಲಿ ತೋರಣಗಲ್ ಸಮೀಪದ ಮತ್ತೊಂದು ಊರು ಶಂಕರಗುಡ್ಡದಲ್ಲಿ ಇದೇ ರೀತಿಯ ಯೋಜನೆ ಆರಂಭಿಸಿ ಸುಮಾರು 80 ಮಹಿಳೆಯರಿಗೆ ಉದ್ಯೋಗಾವಕಾಶ ಕಲ್ಪಿಸಲಾಗಿದೆ. 'ಮಹಿಳೆಯರು ಸ್ವತಂತ್ರರಾದದ್ದು ಖುಷಿಯ ಸಂಗತಿ' ಎನ್ನುತ್ತಾರೆ ಶಂಕರಗುಡ್ಡ ಬಿಪಿಒ ಮುಖ್ಯಸ್ಥ ಭವಾನಿಸಿಂಗ್.

ಈ ಹಳ್ಳಿ ಮಹಿಳೆಯರು ಎಸ್ಸೆಸ್ಸೆಲ್ಸಿ ಪಾಸಾದ ಬಳಿಕ ಇಲ್ಲಿ ತರಬೇತಿ, ಉದ್ಯೋಗ ಪಡೆದ ಬಳಿಕ ಮುಂದಿನ ವಿದ್ಯಾಭ್ಯಾಸವಾಗಿ ಡಿಪ್ಲೊಮ, ಪದವಿ, ಸ್ನಾತಕೋತ್ತರ ಪದವಿಯನ್ನೂ ಓದಿದವರಿದ್ದಾರೆ. ಇಂದಿರಾಗಾಂಧಿ ಮುಕ್ತ ವಿಶ್ವವಿದ್ಯಾಲಯದ ಮೂಲಕ ಅಂಚೆ ತೆರಪಿನ ಶಿಕ್ಷಣ ಪಡೆಯಲು ಜೆಎಸ್‌ಡಬ್ಲ್ಯುವಿನ ಬಿಪಿಒ ಘಟಕದ ಆಕಾಂಕ್ಷಾ ಗ್ರಾಮೀಣ ಅಭಿವೃದ್ಧಿ ಸಂಸ್ಥೆ (ಎಆರ್‌ಡಿಎಸ್) ಅವಕಾಶವನ್ನೂ ಕಲ್ಪಿಸಿಕೊಟ್ಟಿದೆ. ಈ ಮಹತ್ವಾಕಾಂಕ್ಷೆಯ ಯೋಜನೆ ಸಾಕಾರಗೊಂಡದ್ದು ಜೆಎಸ್‌ಡಬ್ಲ್ಯು ಸಂಸ್ಥೆಯ ಸಂಸ್ಥಾಪಕಿ ಸಂಗೀತಾ ಜಿಂದಾಲ್ ಅವರ ದೂರದೃಷ್ಟಿಯ ಫಲದಿಂದ.

ಇಲ್ಲಿನ ಮಹಿಳೆಯರು ಡೇಟಾ ಎಂಟ್ರಿ, ಆರೋಗ್ಯ ಸೇವೆಗಳು, ಶಾಲಾ ಶಿಕ್ಷಕಿಯಾಗಿ ಕೆಲಸ ಮಾಡುವಲ್ಲಿ ತರಬೇತಿ ಹೊಂದಿದ್ದು, ಬಿಪಿಒ ಇವರಿಗಾಗಿ ಉಚಿತ ಬಸ್ ವ್ಯವಸ್ಥೆ, ಇಎಸ್‌ಐ ಸೌಲಭ್ಯ, ಪಿಎಫ್, ಬೋನಸ್, ವಿಮೆ ಮುಂತಾದ ಅಗತ್ಯ ಸೌಲಭ್ಯಗಳನ್ನೂ ಒದಗಿಸಿದೆ. ಒಟ್ಟಿನಲ್ಲಿ ಮಹಿಳಾ ಸ್ವಾವಲಂಬನೆಗಾಗಿ ಶಕ್ತಿಮೀರಿ ಶ್ರಮಿಸುತ್ತಾ ಅನೇಕ ಬಡವರಿಗೆ ಭರವಸೆಯ ಆಶಾಕಿರಣವಾಗಿ ಪರಿಣಮಿಸಿದೆ.

'ಇಲ್ಲಿಯ ಹಳ್ಳಿಯ ಮಹಿಳೆಯರ ಜೀವನಮಟ್ಟ ಅತ್ಯಂತ ಕೆಳಮಟ್ಟದಲ್ಲಿತ್ತು. ಮೂರು ಹೊತ್ತಿನ ಊಟಕ್ಕೂ ತತ್ವಾರ ಪಡುವಂತಹ ಕುಟುಂಬಗಳಿದ್ದವು. ಮಹಿಳೆಯರಿಗೆ ತಮ್ಮ ಸಹಿ ಹಾಕಲೂ ಬರುತ್ತಿರಲಿಲ್ಲ. ಅಂಥ ಮಹಿಳೆಯರನ್ನು ಗುರುತಿಸಿ ಅವರಿಗೆ ಶಿಕ್ಷಣ, ಉದ್ಯೋಗ ನೀಡಿ ಆರ್ಥಿಕವಾಗಿ ಸ್ವಾವಲಂಬಿಗಳನ್ನಾಗಿ ಮಾಡಿದ್ದೇವೆ. ಕಂಪ್ಯೂಟರ್ ತರಬೇತಿ ನೀಡಿ ಈಗ ಕಂಪ್ಯೂಟರ್‌ನಲ್ಲೇ ಡೇಟಾ ಎಂಟ್ರಿಯಂತಹ ಕೆಲಸಗಳನ್ನು ಮಾಡಿ ಕುಟುಂಬಕ್ಕೆ ಆರ್ಥಿಕ ಶಕ್ತಿ ಹಾಗೂ ಬೆನ್ನೆಲುಬಾಗಿ ನಿಂತಿದ್ದಾರೆ' ಎನ್ನುತ್ತಾರೆ ಬಿಪಿಒದ ಡೆಪ್ಯೂಟಿ ಮ್ಯಾನೇಜರ್ ರಮೇಶ್ ಟಿ.

'ಇಲ್ಲಿ ಬರೀ ಹೆಣ್ಣು ಮಕ್ಕಳಿಗಷ್ಟೇ ಅವಕಾಶ ಇರುವುದರಿಂದ ಹೆಚ್ಚು ಸುರಕ್ಷತೆ ಇದೆ. ಹೀಗಾಗಿ ಎಷ್ಟೇ ಸಂಕೀರ್ಣ, ಸಾಂಪ್ರದಾಯಿಕ ಕುಟುಂಬಗಳಿಂದಲೂ ಹೆಣ್ಣುಮಕ್ಕಳನ್ನು ಉದ್ಯೋಗಕ್ಕೆ ಕಳುಹಿಸುತ್ತಿದ್ದಾರೆ. ಗಳಿಸಿದ ಹಣವನ್ನು ಹಾಗೆಯೇ ಕೂಡಿಟ್ಟು ಮನೆ ನಿರ್ವಹಣೆ, ಒಡವೆ, ಮದುವೆ ಮುಂತಾದವುಗಳಿಗೆ ಸದುಪಯೋಗ ಪಡಿಸಿಕೊಳ್ಳುತ್ತಿದ್ದಾರೆ. ಕಂಪ್ಯೂಟರ್ ಜ್ಞಾನವೇ ಇಲ್ಲದಿರುವ ಮಹಿಳೆಯರು ಇಲ್ಲಿಗೆ ಬಂದು ಕಲಿತು ಇದೀಗ ಆನ್‌ಲೈನ್‌ನಲ್ಲೇ ಶಾಪಿಂಗ್ ಮಾಡುವಷ್ಟು ಪಳಗಿದ್ದಾರೆ. ಸ್ಮಾರ್ಟ್‌ಫೋನ್ ಖರೀದಿಸಿ ಸಾಮಾಜಿಕ ಜಾಲ ತಾಣಗಳಲ್ಲೂ ಸಕ್ರಿಯರಾಗಿದ್ದಾರೆ' ಎಂದು ಮೆಚ್ಚುಗೆ ವ್ಯಕ್ತಪಡಿಸುತ್ತಾರೆ ರಮೇಶ್. ■